ಓ.ಎಸ್. ನಂಃ **17/2022**
ಡಿ.ಡಬ್ಲ್ಯೂಃ **2**

ದಿನಾಂಕ **18.06.2026** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿಯ ಪರ ಃ ಶ್ರೀ ಎಂ ಎಂ ಇ ವಕೀಲರಿಂದಃ

ನಾನು ಎಂ.ಸಿ ಎ ಪದವಿಧರ ಆಗಿರುತ್ತೇನೆ. ನಾನು ಕಳೆದ 13 ವರ್ಷಗಳಿಂದ ಯಾದಗಿರಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಂಪ್ಯೂಟರ ಆಪರೇಟರಾಗಿ ಕೆಲಸ ಮಾಡುತ್ತಿದ್ದೇನೆ. ದಾವಾ ಆಸ್ತಿಗಳು ಮೂರು ಸರ್ವೆ ನಂಬರಗಳು ಇರುತ್ತವೆ ಎಂದರೆ ಸರಿ. ದಾವಾ ಜಮೀನುಗಳ ಸುತ್ತ ಮುತ್ತ ನನ್ನ ಜಮೀನು ಇಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ದಾವಾ ಜಮೀನು ಸರ್ವೆ ನಂಬರ 114/ಇ ಮಡೇಪಲ್ಲಿ ಗ್ರಾಮದ ಜಮೀನು ಆಗಿರುತ್ತದೆ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ಮಡೇಪಲ್ಲಿ ಗ್ರಾಮದ ವ್ಯಾಪ್ತಿಯಲ್ಲಿ ನಾನು ಯಾವುದೇ ಜಮೀನು ಹೊಂದಿರುವುದಿಲ್ಲ ಎಂದರೆ ಸರಿ. ಚಂದರಕಿ ಗ್ರಾಮದ ವ್ಯಾಪ್ತಿಯಲ್ಲಿಯೂ ಸಹ ನಾನು ಯಾವುದೇ ಜಮೀನು ಹೊಂದಿರುವುದಿಲ್ಲ ಎಂದರೆ ಸರಿ.

02. ನಾನು ಗುರುಮಿಠಕಲ್ ಪಟ್ಟಣದ ಖಾಯಂ ವಾಸಿಯಾಗಿರುತ್ತೇನೆ ಎಂದರೆ ಸರಿ. ನಾನು ಯಾವುತ್ತು ಚಂದರಕಿ ಗ್ರಾಮಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. 6 ರಿಂದ 8 ನೇ ಪ್ರತಿವಾದಿಯರಿಗೆ ಹಕ್ಕು ಬಿಟ್ಟು ಪತ್ರ ಮಾಡಿಕೊಡುವುದಾಗಿ 6 ರಿಂದ 8 ನೇ ಪ್ರತಿವಾದಿಯರು ಹಾಗೂ ವೆಂಕಟಮ್ಮರವರ ನಡುವೆ 2020-21 ರಲ್ಲಿ ಮಾತುಕತೆ ಆಗಿತ್ತು. ಆ ಸಮಯದಲ್ಲಿ ನಾನು ಸಹ ಹಾಜರು ಇದ್ದೆನು. ದಾವಾ ಸರ್ವೆ ನಂ.144 ರಜಮೀನನ್ನು 8 ನೇ ಪ್ರತಿವಾದಿ ಜೋತಿ ರವರಿಗೆ, ಸರ್ವೆ ನಂ.532 ರ ಜಮೀನನ್ನು 6 ನೇ ಪ್ರತಿವಾದಿ ಮರೆಮ್ಮ ಹಾಗೂ ಸರ್ವೆ ನಂ.533 ರ ಜಮೀನನ್ನು 7 ನೇ ಪ್ರತಿವಾದಿ ಪದ್ಮಮ್ಮರವರಿಗೆ ಕೊಡುವುದಾಗಿ ಮಾತುಕತೆ ಮಾಡಿದ್ದರು. ಈ ರೀತಿ ಮಾತುಕತೆಯಾದ 6 ತಿಂಗಳ ನಂತರ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿದ್ದರು. ಸದರಿ ಹಕ್ಕು ಬಿಡುಗಡೆ ಪತ್ರದಲ್ಲಿ ನಾನು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ಗೋವಿಂದ ಹಾಗೂ ಲಕ್ಷ್ಮಪ್ಪ ಎಂಬುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. 8 ನೇ ಪ್ರತಿವಾದಿಗೆ 34 ಗುಂಟೆ ಜಮೀನು ನೀಡಿರುತ್ತಾರೆ. 7 ನೇ ಪ್ರತಿವಾದಿಗೆ 02 ಎಕರೆ 29 ಗುಂಟೆ ಜಮೀನು ನೀಡಿರುತ್ತಾರೆ. 6 ನೇ ಪ್ರತಿವಾದಿಗೆ 2 ಎಕರೆ ಜಮೀನು ನೀಡಿರುತ್ತಾರೆ. 6 ರಿಂದ 8 ನೇ ಪ್ರತಿವಾದಿಯರು ಸ್ವಂತ ಸಹೋದರಿಯರು ಆಗಿರುವುದಿಲ್ಲ ಎಂದರೆ ಸರಿ. ಆ ಪೈಕಿ 6 ನೇ

ಪ್ರತಿವಾದಿ ನನ್ನ ಸ್ವಂತ ಅಕ್ಕ ಆಗಿರುತ್ತಾರೆ. ನಾನು 6 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

03. ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ನಾನು ಲಕ್ಷ್ಮಮ್ಮ ರವರಿಗೆ ವಯಸ್ಸಾಗಿದ್ದ ದಿನಗಳಲ್ಲಿ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ 6 ರಿಂದ 8 ನೇ ಪ್ರತಿವಾದಿಯರಿಗೆ ಹಕ್ಕು ಬಿಟ್ಟುಕೊಟ್ಟ ಪತ್ರ ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದೆನು ಎಂದರೆ ಸರಿಯಲ್ಲ. ನಾನು 6 ರಿಂದ 8 ನೇ ಪ್ರತಿವಾದಿಯರಿಂದ ರೂ.10 ಲಕ್ಷ ಪ್ರತಿಫಲ ಪಡೆದು ಅವರಿಗೆ ಹಕ್ಕು ಬಿಟ್ಟ ಪತ್ರಗಳನ್ನು ಮಾಡಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಣದಿಂದ ನೀವು ಹೈದರಾಬಾದಿನಲ್ಲಿ ಮನೆ ಖರೀದಿ ಮಾಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ, ನನ್ನ ತಂದೆ ಹೈದರಾಬಾದಿನಲ್ಲಿ 40 ವರ್ಷದ ಹಿಂದೆಯೇ ಮನೆ ಕಟ್ಟಿಸಿದ್ದಾರೆ ಎಂದು ನುಡಿಯುತ್ತಾರೆ. ಆ ನಂತರ ವಾದಿ ಈ ದಾವೆ ದಾಖಲಿಸಿದಾಗ 6 ರಿಂದ 8 ನೇ ಪ್ರತಿವಾದಿಯರು ನನಗೆ ಹಣ ಮರುಪಾವತಿ ಮಾಡಬೇಕು ಇಲ್ಲವಾದರೆ ಜಮೀನು ಕೊಡಬೇಕು ಎಂದು ಹೇಳಿದ್ದರಿಂದ ನಾನು ಅವರ ಪರವಾಗಿ ಸುಳ್ಳು ಸಾಕ್ಷ್ಯನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಏನು ಮಾಹಿತಿ ಇಲ್ಲದೇ ಇದ್ದರೂ 6 ರಿಂದ 8 ನೇ ಪ್ರತಿವಾದಿಯರಿಂದ ಹಣ ಪಡೆದುಕೊಂಡು ಅವರ ಪರವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಸಿವಿಲ್ ಮತ್ತು ಜೆಎಂಎಫ್‌ಸಿ
ನ್ಯಾಯಾಧೀಶರು,ಯಾದಗಿರಿ.